**ಸಾಕ್ಷಿಯನ್ನು ದಿಃ 12.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್.ಎಂ.ಪಿ.ವಕೀಲರಿಂದಃ**

ನಾನು ಅರ್ಜಿದಾರರಿಗೆ ಚಿಕಿತ್ಸೆಯನ್ನು ನೀಡಿರುವುದಿಲ್ಲ. ನಾನು ಅರ್ಜಿದಾರರ ಅಂಗ್ಯ ನ್ಯೂನ್ಯತೆಯನ್ನು ಪರೀಕ್ಷಿಸಲು ಮಾತ್ರ ಅರ್ಜಿದಾರರನ್ನು ಪರೀಕ್ಷಿಸಿರುತ್ತೇನೆ. ಸದರಿ ಅಂಗ ನ್ಯೂನ್ಯತೆಯನ್ನು ನಿರ್ಧರಿಸುವ ಪೂರ್ವದಲ್ಲಿ ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರ ಸಲಹೆಯನ್ನು ಮತ್ತು ಅರ್ಜಿದಾರರ follow up records ಅನ್ನು ಪರಿಶೀಲಸಿರುವುದಿಲ್ಲ. ನಾನು ಅರ್ಜಿದಾರರನ್ನು ವಿಕ್ಟೋರಿಯ ಆಸ್ಪತ್ರೆಯಲ್ಲಿ ಪರೀಕ್ಷಿಸಿರುತ್ತೇನೆ. ನಾನು ಸದರಿ ವಿಕ್ಟೋರಿಯ ಆಸ್ಪತ್ರೆಯಲ್ಲಿ ಬೋರ್ಡ್ ಮೆಂಬರ್ಸ್ ಇರುತ್ತೇನೆ. ಸದರಿ ಅಂಗ ನ್ಯೂನ್ಯತೆಯನ್ನು ನಿರ್ಧರಿಸುವ ಪೂರ್ವದಲ್ಲಿ ಸದರಿ ಬೋರ್ಡ್ ಮೆಂಬರ್ಸ್ ರವರ ಅಭಿಪ್ರಾಯವನ್ನು ಪಡೆದಿರುವುದಿಲ್ಲ. ನಾನು ಅರ್ಜಿದಾರರ ಅಂಗ ನ್ಯೂನ್ಯತೆಯ disability certificate ಅನ್ನು ನೀಡಿರುವುದಿಲ್ಲ ಆದರೆ ಅಂಗ ನ್ಯೂನ್ಯತೆಯ ಪರಿಶೀಲಿಸಿರುತ್ತೇನೆ. ನಾನು ಅರ್ಜಿದಾರರನ್ನು ಪರೀಕ್ಷಿಸಿದಾಗ ಸದರಿ ಅರ್ಜಿದಾರರ ಮೂಳೆ ಮುರಿತ ಕೂಡಿಕೊಂಡಿರುತ್ತದೆ. ನಾನು ತಲೆಯ ಗಾಯಕ್ಕೆ ಅಂಗ ನ್ಯೂನ್ಯತೆಯನ್ನು ನಿರ್ಧರಿಸಿರುವುದಿಲ್ಲ. ನಾನು ಮೂಳೆ ಮುರಿತಕ್ಕೆ ಮಾತ್ರ ಅಂಗ ನ್ಯೂನ್ಯತೆಯನ್ನು ನಿರ್ಧರಿಸಿರುತ್ತೇನೆ. ಸದರಿ ಅರ್ಜಿದಾರರ right humor ಮತ್ತು knee dislocation ಗೆ ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ಸದರಿ knee dislocation ಗೆ ಅಳವಡಿಸಿರುವ ಒಳಜೋಡಣೆಯನ್ನು ತೆಗೆಯಲಾಗಿದೆ. ಈಗ ಸದರಿ

knee dislocation reduce ಆಗಿದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ನೋವು ತೊಂದರೆಗಳನ್ನು ಅರ್ಜಿದಾರರು ನನಗೆ ತಿಳಿಸಿರುತ್ತಾರೆ ನಂತರ ಅರ್ಜಿದಾರರನ್ನು ಪರೀಕ್ಷಿಸಿರುತ್ತೇನೆ. ನಾನು ಅರ್ಜಿದಾರರ discharge summary ಯನ್ನು ಪರಿಶೀಲಿಸಿರುತ್ತೇನೆ. ಸದರಿ ಅರ್ಜಿದಾರರು follow up ಚಿಕಿತ್ಸೆಯನ್ನು ಎಷ್ಟು ಬಾರಿ ಪಡೆದುಕೊಂಡಿರುತ್ತಾರೆಂದು ನನಗೆ ಮಾಹಿತಿ ನೀಡಿರುವುದಿಲ್ಲ. ಸದರಿ ಅರ್ಜಿದಾರರಿಗೆ ಅಳವಡಿಸಿರುವ ಒಳಜೋಡಣೆಯನ್ನು ತೆಗೆಯದೆ ಅಂಗ ನ್ಯೂನ್ಯತೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಒಳಜೋಡಣೆಯನ್ನು ಅಳವಡಿಸಿರುವುದರಿಂದ ಅರ್ಜಿದಾರರಿಗೆ ನೋವು ತೊಂದರೆಗಳು ಕಾಣಿಸಿಕೊಳ್ಳುತ್ತದೆ ಎಂದರೆ ಸರಿಯಲ್ಲ. ನಾನು ಸರ್ಕಾರದ ಕೈಪಿಡಿ ಪ್ರಕಾರ ಅರ್ಜಿದಾರರ limb disability ಯನ್ನು ನಿರ್ಧರಿಸಿರುತ್ತೇನೆ. ನಾನು lower limb ಮತ್ತು upper limb ನಿಂದ ಇಡೀ ದೇಹಕ್ಕೆ ಎಷ್ಟು ಅಂಗ ನ್ಯೂನ್ಯತೆ ಇದೆ ಎಂದು ಅಂಕಿ ಅಂಶವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ಸದರಿ ಸರ್ಕಾರದ ಕೈಪಿಡಿ ಪ್ರಕಾರ limb ಗೆ 50% ತೆಗೆದುಕೊಳ್ಳಬೇಕೆಂದು ಇರುವುದಿಲ್ಲ ಎಂದರೆ ಸರಿ. ಸದರಿ limb ನಿಂದ whole body ಗೆ ಮಾಡುವಾಗ 1/3rd ತೆಗೆದುಕೊಳ್ಳಬೇಕು ಎಂದರೆ ಸರಿಯಲ್ಲ. ಸದರಿ ಅರ್ಜಿದಾರರಿಗೆ ದಿನನಿತ್ಯದ ಕೆಲಸ ಚಟುವಟಿಕೆಗಳನ್ನು ಮಾಡಲು ತೊಂದರೆ ಇದೇಯಾ ಎಂದರೆ ಕಷ್ಟದಲ್ಲಿ ಮಾಡಬಹುದು. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡದ ಕಾರಣ ಅರ್ಜಿದಾರರ ಅಂಗ ನ್ಯೂನ್ಯತೆಯನ್ನು

ನಿರ್ಧರಿಸಲು ನಾನು ಅರ್ಹ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಹೆಚ್ಚಿನ ಕಡೆ ಅಂಗ ನ್ಯೂನ್ಯತೆಯನ್ನು ನಿರ್ಧರಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** *1* ನೇ ಎದುರುದಾರರ ಪರ ವಕೀಲರು ಗೈರುಹಾಜರಿದ್ದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲ್ಪಟ್ಟಿದೆ)

(ಓ.ಹೆ.ಕೆ.ಸ.ಇ.)

IX ಹಿರಿಯ ಹೆಚ್ಚುವರಿ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು